ದಿನಾಂಕಃ10.09.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ವೈ.ಸಿ.ಎಂ. ವಕೀಲರಿಂದ:**

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಜೇನುಬೈಲಿನ ವಾಸಿ. ನನ್ನ ಅಜ್ಜನ ಕಾಲದಿಂದಲೂ ನಾವು ಅಲ್ಲಿಯೇ ವಾಸಿಸುತ್ತಿದ್ದೇವೆ. ಅಂಗಡಿ ಗ್ರಾಮಕ್ಕೂ ನಮ್ಮ ಗ್ರಾಮಕ್ಕೂ 1 ಕಿ.ಮೀ ಅಂತರ ಇದೆ. 1 ನೇ ಪ್ರತಿವಾದಿ ನನ್ನ ಅಣ್ಣ. ಅವರು ಸಹಾ ಜೇನುಬೈಲಿನಲ್ಲಿ ವಾಸಿಸುತ್ತಿದ್ದಾರೆ. ನಾವಿಬ್ಬರು ಬೇರೆ ಬೇರೆ ವಾಸಿಸುತ್ತಿದ್ದೇವೆ. 3 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ. ಅವರು ಸಹಾ ಜೇನುಬೈಲಿನ ವಾಸಿ. ಪದ್ಮಯ್ಯ ಬಿನ್ ವಸಂತಯ್ಯ ನನ್ನ ತಂದೆ. ಈ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಅಂಗಡಿ ಗ್ರಾಮದ ಸ.ನಂ.121 ರ ಒಟ್ಟು ವಿಸ್ತೀರ್ಣ 15 ಎಕರೆ ಇರಬಹುದು. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ವಾದಿಯ ತಂದೆ ಕೃಷ್ಣ ರವರ ಪರಿಚಯ ನನಗಿಲ್ಲ. 1980-81 ನೇ ಇಸವಿಯಲ್ಲಿ ವಾದಿಯ ತಂದೆಗೆ ಸ.ನಂ.121 ರಲ್ಲಿ 2 ಎಕರೆ 30 ಗುಂಟೆ ಜಮೀನು ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ವಾದಿಯ ತಂದೆ ಸುಮಾರು 30 ವರ್ಷಕ್ಕಿಂತ ಹೆಚ್ಚಿನ ಅವದಿಯಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ಪದ್ಮಯ್ಯರವರು 2003 ರಲ್ಲಿ ತೀರಿಕೊಂಡರು. ದಾವ ಜಮೀನು ವಾದಿಯ ತಂದೆಗೆ ಮಂಜೂರಾದಾಗ ನಾನಗಲೀ ನನ್ನ ತಂದೆಯಾಗಲೀ ತಕರಾರು ಸಲ್ಲಿಸಿರಲಿಲ್ಲ. ವಾದಿಯ ತಂದೆಯ ಹೆಸರಿಗೆ ಕಂದಾಯ ದಾಖಲಾತಿಗಳು ಬಂದಾಗ ಅವರ ವಿರುದ್ದ ನಾವು ಯಾವುದೇ ದಾವೆಯನ್ನು ಸಲ್ಲಿಸಿಲ್ಲ. ದಾವ ಜಮೀನಿನಲ್ಲಿ ವಾದಿ ಮತ್ತು ಅವರ ಕುಟುಂಬದವರು ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಜಮೀನಿನಲ್ಲಿ ಕಾಫೀ ಮತ್ತು ಮೆಣಸು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವಂತೆ ಜಮೀನು ಮಂಜೂರಾತಿ ಕೋರಿ ಸಲ್ಲಿಸಿದ ಅರ್ಜಿಯ ನಕಲನ್ನು ಹಾಜರುಪಡಿಸಿದ್ದೇನೆ. ನಿಡಿ-1 ರಿಂದ 12 ರಲ್ಲಿ ಗುರುತಾಗಿರುವ ದಾಖಲೆಗಳ ಪೈಕಿ ನಿಡಿ-10 ಸದರಿ ಅರ್ಜಿಯ ನಕಲಾಗಿದೆ. ಆ ರೀತಿ ಅರ್ಜಿ ಸಲ್ಲಿಸಿದ ದಿನಾಂಕ ನೆನಪಿಲ್ಲ. ಜಮೀನು ಮಂಜೂರಾಗಿದೆ ಎಂದು ಹೇಳಿರುಕೊಂಡಿರುವ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯ ಆ ದಾಖಲೆಗಳು ತಮಗೆ ಇನ್ನೂ ಸಿಕ್ಕಿಲ್ಲ ಎಂದು ನುಡಿಯುತ್ತಾರೆ.

ನಾನು ಅನುಭವದಲ್ಲಿ ಇದ್ದೇನೆ ಎಂದು ಹೇಳಲಾದ ಜಮೀನಿನ ಪೂರ್ವಕ್ಕೆ ಈಶ್ವರನ ದೇವಸ್ಥಾನ, ಪಶ್ಚಿಮಕ್ಕೆ ರಾಘವ ಮತ್ತು ಕೇಶವರವರ ಜಮೀನು, ಉತ್ತರ ಮತ್ತು ದಕ್ಷಿಣಕ್ಕೆ ಕೆರೆ ಇದೆ. ಈ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಾಗಲೀ ಪ್ರಮಾಣಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ. ನನ್ನ ಪ್ರಮಾಣಪತ್ರದಲ್ಲಿ ನಮಗೆ ಜಮೀನು ಮಂಜೂರಾಗಿದೆ ಎಂದು ಹೇಳಿರುವ ಬಾಬ್ತು ನಮಗೆ ಎಂದರೆ ಮಂಜಯ್ಯ, ನಿಂಗಯ್ಯ,

ಪದ್ಮಯ್ಯ, ರುದ್ರಯ್ಯ, ರಾಘವ, ಕೇಶವ ಮತ್ತು ಅಣ್ಣೇಗೌಡ ಎಂದು ಅರ್ಥ. ಸದರಿ ವ್ಯಕ್ತಿಗಳಿಂದ ಸಾಕ್ಷಿ ಹೇಳಿಸಲು ನನಗೆ ತೊಂದರೆ ಇಲ್ಲ. ನಿಡಿ-1 ರ ಪತ್ರವನ್ನು ಈ ಪ್ರಕರಣ ದಾಖಲಾದ ನಂತರ ಕೊಡಲಾಗಿದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಸ.ನಂ.121/ಪಿ1 ಎಂದು ಇದೆ ಎಂದರೆ ಸರಿ. ನಿಡಿ-1 ರಲ್ಲಿ ಎಲ್ಲಿಯೂ ಸಹಾ ಪದ್ಮಯ್ಯ ಎಂಬ ಹೆಸರನ್ನು ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ನಿಡಿ-1 ಕ್ಕೆ ತಾಲ್ಲೂಕು ಕಚೇರಿಯಿಂದ ಯಾವುದೇ ಉತ್ತರವನ್ನು ಕೊಟ್ಟಿಲ್ಲ. ನಿಡಿ-1 ನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ದಿನಾಂಕ ಇಲ್ಲ ಎಂದರೆ ಸರಿ. ನಿಡಿ-2 ನ್ನು ಪಶುಸಂಗೋಪನಾ ಸಚಿವರಿಗೆ ಕೊಟ್ಟಿದ್ದೇನೆ. ಸದರಿ ದಾಖಲೆಯಲ್ಲಿ ಸ್ವೀಕೃತಿ ಇಲ್ಲ ಎಂದರೆ ಸರಿ. ನಿಡಿ-2 ನ್ನು ಸಹಾ ಈ ದಾವೆಗೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೂ ಯಾವುದೇ ಉತ್ತರ ಬಂದಿಲ್ಲ.

ನಿಡಿ-3 ರನ್ನು ನನ್ನ ಅಣ್ಣ ಕೊಟ್ಟಿದ್ದಾರೆ. ಸದರಿ ದಾಖಲೆಯ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಿಡಿ-3 ರ ಪತ್ರಕ್ಕೂ ತಹಶೀಲ್ದಾರ್ ರವರಿಂದ ಯಾವುದೇ ಉತ್ತರ ಬಂದಿಲ್ಲ. ನಿಡಿ-3 ನ್ನು ಸಹಾ ಈ ದಾವೆಗೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-4 ನ್ನು ಮರಮಾಲ್ಕಿ ಸಂಬಂಧವಾಗಿ ಕೊಡಲಾಗಿದೆ. ಆ ಪತ್ರವನ್ನು ದಿ.27.07.2015 ರಂದು ಪದ್ಮಯ್ಯರವರು ಕೊಟ್ಟಿರುವುದಾಗಿ ಇದೆ ಎಂದರೆ ಸರಿ. ನಿಡಿ-4 ರಲ್ಲಿ ಪದ್ಮಯ್ಯ ರವರ ಸಹಿ ಇಲ್ಲ ಎಂದರೆ ಸರಿ. ಜಮೀನಿನ ಅನುಭದದಲ್ಲಿ ಇದ್ದೇವೆ ಎಂದು ತೋರಿಸಲು ನಿಡಿ-4 ನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಅರ್ಜಿಗೂ ಯಾವುದೇ ಉತ್ತರ ಬಂದಿಲ್ಲ. ನಿಡಿ-5 ನ್ನು ಪದ್ಮಯ್ಯ, ಮಂಜಯ್ಯ, ನಿಂಗಯ್ಯ ಮತ್ತು ರುದ್ರಯ್ಯ ರವರು ಸೇರಿ ದಿ.20.07.2015 ರಂದು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಪದ್ಮಯ್ಯ, ಮಂಜಯ್ಯ, ನಿಂಗಯ್ಯ ಮತ್ತು ರುದ್ರಯ್ಯ ರವರ ಸಹಿ ಇಲ್ಲ ಎಂದರೆ ಸರಿ. ನಿಡಿ-5 ರಲ್ಲೂ ಸಹಾ ನಮಗೆ ಜಮೀನು ಮಂಜೂರಾಗಿರುವ ಬಗ್ಗೆ ಎಲ್ಲೂ ನಮೂದು ಇಲ್ಲ ಎಂದರೆ ಸರಿ. ಆ ಪತ್ರದಲ್ಲಿ ಅಕ್ರಮ ಸಕ್ರಮವಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದು ತೋರಿಸಲಾಗಿದೆ ಎಂದರೆ ಸರಿ. ನಿಡಿ-5 ಕ್ಕೂ ಯಾವುದೇ ಉತ್ತರ ಬಂದಿಲ್ಲ. ನಿಡಿ-5 ನ್ನು ಸಹಾ ಈ ದಾವೆಗೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ನಿಡಿ-6 ರಲ್ಲಿ ನಮೂದಿಸಿರುವ ಮಂಜಯ್ಯ ಬಿನ್ ಬೈರಯ್ಯ ನನ್ನ ಅಣ್ಣ. ಸದರಿ ಮಂಜಯ್ಯ ರವರು ಸುಮಾರು ವರ್ಷದ ಹಿಂದೆ ತೀರಿಕೊಂಡರು. ನಿಡಿ-6 ರಲ್ಲಿ ಮಂಜಯ್ಯರವರ ಸಹಿ ಇಲ್ಲ ಎಂದರೆ ಸರಿ. ಮಂಜಯ್ಯ ರವರ ಮಗನ ಹೆಸರು ಸುರೇಶ್. ಸದರಿ ಸುರೇಶ್ ರವರನ್ನು ಸಾಕ್ಷಿ ಮಾಡಿಸಬಲ್ಲೆ. ನಿಡಿ-6 ಕ್ಕೆ ಏನಾದರೂ ಉತ್ತರ ಬಂದಿದೆಯಾ ಎಂದು ನನಗೆ ಮಾಹಿತಿ ಇಲ್ಲ. ನಿಡಿ-6 ನಮ್ಮ ಕುಟುಂಬಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾವಿಬ್ಬರು ಸೇರಿ ಆ ಅರ್ಜಿಯನ್ನು ಕೊಟ್ಟಿದ್ದೇವೆ ಎಂದರೆ ಸರಿ. ನಿಡಿ-6 ನ್ನು ಸುಳ್ಳು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಡಿ-7 ರ ಸಂಬಂಧ ಯಾವ ದಿನಾಂಕದಂದು ಅರ್ಜಿ ಕೊಡಲಾಗಿತ್ತು ಎಂದು ನನಗೆ ನೆನಪಿಲ್ಲ. ಆ ಅರ್ಜಿಯ ನಕಲು ನನ್ನ ಬಳಿ ಇದ್ದು

ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನಿಡಿ-8 ರ ಅರ್ಜಿಯನ್ನು ಮರಮಾಲ್ಕಿ ರದ್ದು ಮಾಡಿರುವ ಸಂಬಂಧ ಮಾಹಿತಿ ಕೋರಿ ಅರ್ಜಿ ಸಲ್ಲಿಸಲಾಗಿದೆ. ನಿಡಿ-8 ರಲ್ಲಿ ಶುಲ್ಕ ಪಾವತಿ ಬಗ್ಗೆ ತೋರಿಸಿಲ್ಲ ಎಂದರೆ ಸರಿ. ನಿಡಿ-8 ರ ಸಂಬಂಧ ಮಾಹಿತಿ ಬಂದಿರಬಹುದು. ನಿಡಿ-9 ನ್ನು ಮೋಟಮ್ಮ ರವರಿಗೆ ಬರೆಯಲಾಗಿದೆ. ಸದರಿ ಅರ್ಜಿಯನ್ನು ರುದ್ರಯ್ಯ, ಮಂಜಯ್ಯ ಮತ್ತು ನಿಂಗಯ್ಯ ರವರಿಂದ ಕೊಡಿಸಲಾಗಿದೆ ಎಂದರೆ ಸರಿ. ನಿಡಿ-9 ರ ಬಗ್ಗೆ ಯಾವುದೇ ಸ್ವೀಕೃತಿ ಇಲ್ಲ ಎಂದರೆ ಸರಿ. ನಿಡಿ-9 ನ್ನು ಬರೆದಿರುವವರ ಸಹಿ ಆ ದಾಖಲೆಯಲ್ಲಿ ಇಲ್ಲ ಎಂದರೆ ಸರಿ.

ನಿಡಿ-9 ರಲ್ಲಿ ಉಲ್ಲೇಖಿಸಿರುವ ನೋಟೀಸನ್ನು ಹಾಜರುಪಡಿಸಿದ್ದೇನೆ. ಮರಮಾಲ್ಕಿ ರೂ.5,725/- ಪಾವತಿಸುವಂತೆ ನೋಟೀಸು ಕಳುಹಿಸಿದ್ದರು. ಈ ಬಗ್ಗೆ ಪ್ರತಿವಾದ ಪತ್ರ ಹಾಗೂ ಪ್ರಮಾಣಪತ್ರದಲ್ಲಿ ಹೇಳಿದ್ದೇನೆ. ನಿಡಿ-9 ನ್ನು ನಾವೇ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-10 ನ್ನು 2018 ರಲ್ಲಿ ಸಲ್ಲಿಸಿಕೊಳ್ಳಲಾಗಿದೆ ಎಂದರೆ ಸರಿ. ಆ ದಾಖಲೆ ಸಲ್ಲಿಸಿದ ನಂತರ ಇರುವ ದಾಖಲೆಗಳನ್ನು ಮನೆಯಲ್ಲಿ ಹುಡುಕಿ ಹಾಜರುಪಡಿಸುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.